ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

- 10

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 3/2/2021

### ಹಂಚಿಕೆ ತಾರತಮ್ಯ ವಿರುದ್ಧ ವಿಧಾನ ಪರಿಷತ್‌ನಲ್ಲಿ ಪ್ರತಿಧ್ವನಿ

# ಖನಿಜ ಅನುದಾನ ಪಾಲಿಗೆ ಎಮ್ಮೆಲ್ಸಿಗಳ ಪಟ್ಟು

3/2/21

ರಾಜ್ಯದಲ್ಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅಡಿಯಲ್ಲಿ ಸಂಗ್ರಹವಾದ ಅನುದಾನ ಹಂಚಿಕೆ ಪರಿಷತ್‌ನಲ್ಲಿ ಮಂಗಳವಾರ ಪ್ರತಿಧ್ವನಿಸಿತು. ಇದರ ವಿರುದ್ಧ ಪಕ್ಷಾತೀತವಾಗಿ ಧ್ವನಿ ಎತ್ತಿದ ಶಾಸಕರು ವಿಧಾನಸಭೆ ಸದಸ್ಯರಿಗೆ ನೀಡಿದಂತೆ ನಮಗೂ ಅನುದಾನ ನೀಡಬೇಕು ಎಂದು ಒತ್ತಾಯಿಸಿದರು.

ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್ ಸದಸ್ಯ ಕಾಂತರಾಜ್ ಪರ ಬಸವ ರಾಜ ಹೊರಟ್ಟಿ, ''ಖನಿಜ ಪ್ರತಿಷ್ಠಾನ ಟ್ರಸ್ಟ್‌ಗೆ ಆಯಾ ಜಿಲ್ಲೆಗಳ ಉಸ್ತುವಾರಿ ಸಚಿವರೇ ಅಧ್ಯಕ್ಷರಾಗಿದ್ದಾರೆ. ಆದರೆ, ಟ್ರಸ್ಟ್ ಅಡಿಯಲ್ಲಿ ಸಂಗ್ರಹವಾಗುವ ಅನುದಾನ ಹಂಚಿಕೆಯಲ್ಲಿ ವಿಧಾನಸಭಾ ಸದಸ್ಯರಿಗೆ ಮಾತ್ರ ಮನ್ನಣೆ ನೀಡಲಾಗುತ್ತಿದೆ,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಧ್ವನಿಗೂಡಿಸಿದ ಪ್ರತಿಪಕ್ಷ ನಾಯಕ ಎಸ್.ಆರ್.ಪಾಟೀಲ್, ''ಅನುದಾನ ಹಂಚಿಕೆಯಲ್ಲಿ ತಾರತಮ್ಯ ಸರಿಯಲ್ಲ. ಪರಿಷತ್‌ನವರು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ ನೋಡಬಾರದು. ಆದರೆ, ನಮ್ಮನ್ನು 2ನೇ ದರ್ಜೆಯವರಂತೆ ಕಾಣಲಾಗುತ್ತಿದೆ,'' ಎಂದು ಹೇಳಿದರು. ವೈ.ಎ.ನಾರಾಯಣ ಸ್ವಾಮಿ, ''ನಮ್ಮನ್ನು ಕೇಳುವವರೇ ಇಲ್ಲದಂತಾಗಿದೆ,'' ಎಂದರು. ಅಲ್ಲಂ ವೀರಭದ್ರಪ್ಪ, ಕೆ.ಟಿ. ಶ್ರೀಕಂಠೇಗೌಡ ಕೂಡ ಧ್ವನಿಗೂಡಿಸಿದರು.

**ಪುನರ್ವಸತಿಗೆ 18 ಸಾವಿರ ಕೋಟಿ**

ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವ ಮುರುಗೇಶ್ ನಿರಾಣಿ, ''ಜಿಲ್ಲಾ ಖನಿಜ ಟ್ರಸ್ಟ್ ಅನುದಾನವನ್ನು ಪರಿಷತ್ ಸದಸ್ಯರಿಗೂ ಸಮಾನವಾಗಿ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಗಣಿಯಿಂದ ಸಂಗ್ರಹವಾಗಿರುವ 18 ಸಾವಿರ ಕೋಟಿ ರೂ.ಗಳನ್ನು ಬಾಧಿತ ಪ್ರದೇಶಗಳ ಪುನಶ್ಚೇತನ ಮತ್ತು ಪುನರ್ವಸತಿಗೆ ಬಳಸಬೇಕಿದೆ. ಸುಪ್ರೀಂಕೋರ್ಟ್‌ನ ಮೇಲ್ವಿಚಾರಣೆಯಲ್ಲೇ ಈ ಹಣ ಖರ್ಚು ಮಾಡಬೇಕಿದೆ. ಹಾಗಾಗಿ, ಸದ್ಯದಲ್ಲೇ ಕೇಂದ್ರ ಕಾನೂನು ಸಚಿವರನ್ನು ಭೇಟಿ ಮಾಡಿ ಮೂರು ತಿಂಗಳೊಳಗೆ ಈ ಅನುದಾನ ಬಳಸುವುದಕ್ಕೆ ಮುಂದಾಗುತ್ತೇವೆ,'' ಎಂದು ತಿಳಿಸಿದರು.

ಕಾಂಗ್ರೆಸ್ ಸದಸ್ಯ ಸಿ.ಎಂ.ಇಬ್ರಾಹಿಂ, ''ಖಜಾನೆಯಲ್ಲಿರುವ 18 ಸಾವಿರ ಕೋಟಿ ರೂ.ನಿಂದ ಬರುವ ಬಡ್ಡಿ ಹಣವನ್ನು ತುಂಗಭದ್ರಾ ನದಿಯಲ್ಲಿನ ಹೂಳು ತೆಗೆಯಲು ಬಳಸಬೇಕು. ಇದರಿಂದ ನೀರಿನ ಸಂಗ್ರಹ ಸಾಮರ್ಥ್ಯ ಹೆಚ್ಚಾಗಿ ಸಾವಿರಾರು ರೈತರಿಗೆ ಅನುಕೂಲವಾಗಲಿದೆ,'' ಎಂದು ಸಲಹೆ ನೀಡಿದರು.